( ದಿನಾಂಕ **07-02-2018** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು)

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ನನ್ನ ಅಜ್ಜನ ಹೆಸರು ನಾಗಪ್ಪ ಎಂದರೆ ಸರಿ. ನಾಗಪ್ಪನಿಗೆ ಇಬ್ಬರು ಮಕ್ಕಳು. ಅವರುಗಳು ಈರಪ್ಪ ಮತ್ತು ಈರಪಣ್ಣ. ಅವರಿಬ್ಬರೂ ಹಿಸ್ಸೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಈರಪ್ಪನ ಹೆಂಡತಿ ಕೊಟ್ರಮ್ಮ ಎಂದರೆ ಸರಿ. ನಾಗಪ್ಪ, ಈರಪ್ಪ ಮತ್ತು ಕೊಟ್ರಮ್ಮ ಒಟ್ಟು ಘರಾಣೇದಲ್ಲಿ ಮೃತರಾಗಿದ್ದರು ಎಂದರೆ ಗೊತ್ತಿಲ್ಲ. ನಾಗಪ್ಪ ದಿನಾಂಕ 9-6-1932 ರಂದು ಮೃತರಾಗಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆಯು ದಿನಾಂಕ 24-6-1972 ರಂದು ಮೃತರಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಕೊಟ್ರಮ್ಮ ದಿನಾಂಕ 25-7-1984 ರಂದು ಮೃತರಾಗಿದ್ದರು ಎಂದರೆ ಸರಿಯಲ್ಲ. ಈರಪ್ಪ ಮತ್ತು ಕೊಟ್ರಮ್ಮನಿಗೆ ನಾನು ಮತ್ತು ಚನ್ನಬಸಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಚನ್ನಬಸಮ್ಮ ದಿನಾಂಕ 1-8-1968 ರಂದು ಮೃತಳಾಗಿದ್ದಳು ಎಂದರೆ ಸರಿಯಲ್ಲ. ನಾನು ಮತ್ತು ಚನ್ನಬಸಮ್ಮ ಒಟ್ಟು ಗರಾಣೇದಲ್ಲಿದ್ದೆವು ಎಂದರೆ ಸರಿಯಲ್ಲ.

ನನಗೆ ಚೆನ್ನಮ್ಮ ಮತ್ತು ಶಾರವ್ವ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಚೆನ್ನವ್ವ ಈ ದಾವೆ ಚಾಲ್ತಿಯಲ್ಲಿರುವಾಗ ಮರಣ ಹೊಂದಿರುತ್ತಾಳೆ ಎಂದರೆ ಸರಿ. ನನಗೆ ಚೆನ್ನವ್ವ ಮತ್ತು ಶಾರವ್ವಳಿಂದ ಯಾವದೇ ಮಕ್ಕಳಿಲ್ಲ ಎಂದರೆ ಸರಿ. ಚನ್ನಬಸಮ್ಮನಿಗೆ ಬಸವರಾಜ ಮತ್ತು ನಿಂಗಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಗೊತ್ತಿಲ್ಲ.

ದಾವಾ ಬ ಶೆಡ್ಯೂಲ್ -1 ರಿಂದ 3 ಆಸ್ತಿಗಳು ನನ್ನ ತಂದೆಗೆ ಅವರ ಹಿರಿಯರಿಂದ ಬಂದ ಆಸ್ತಿಗಳಾಗಿವೆ ಎಂದರೆ ಸರಿಯಲ್ಲ. ಸದರಿ 3 ಆಸ್ತಿಗಳಿಂದ ಬಂದ ಉತ್ಪನ್ನದಿಂದ ಉಳಿದ ದಾವಾ ಆಸ್ತಿಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಬ ಶೆಡ್ಯೂಲ-1 ರಿಂದ 3 ಆಸ್ತಿಗಳಿಗೆ ಸಂಬಧಪಟ್ಟ ಡ ನಂಬರ 273, 465, 1050 ಗಳನ್ನು ನೋಡಿದ್ದೇನೆ. ಸದರಿ ಮೂರು ಆಸ್ತಿಗಳು ನನ್ನ ತಂದೆಯ ಖಾತೆಯಲ್ಲಿದ್ದವು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಂದೆಯ ಮರಣಾನಂತರ ನನಗೆ ವಾರಸಾ ಮೂಲಕ ಬಂದಿದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅಜ್ಜನಿಗೆ ವ್ಯವಸಾಯವನ್ನು ಹೊರತು ಪಡಿಸಿ, ಬೇರೆ ಕಸುಬು ಗೊತ್ತಿಲ್ಲ ಎಂದರೆ ಸರಿ. ದಾವಾ ಬ ಶೆಡ್ಯೂಲ್-4 ರಿಂದ 7 ಆಸ್ತಿಗಳು ನನಗೆ ಯಾವದೇ ನೋಂದಣಿ, ಕ್ರಯ ಪತ್ರದ ಮೂಲಕವಾಗಲಿ ದಾನ ಪತ್ರದ ಮೂಲಕವಾಗಲಿ ಮತ್ತು ಯಾವದೇ ಇತರ ನೋಂದಣಿ ದಾಖಲೆಗಳ ಮೂಲಕ ಬಂದಿಲ್ಲ. ಸಾಕ್ಷಿಯು ಅವುಗಳನುನ ತಾನು ದುಡಿದು ಹಿಡಿದಿರುವುದಾಗಿ ಹೇಳಿರುತ್ತಾರೆ. ದಾವಾ ಮನೆ ಮತ್ತು ಜಾಗೆಗಳು ನನ್ನ ತಂದೆ ವೀರಪ್ಪನಿಂದ ಬಂದಿವೆ ಎಂದರೆ ಸರಿಯಲ್ಲ.

ಸರ್ವೇ ನಂಬರ 30/1 ಕ್ಕೆ ಸಂಬಂಧಪಟ್ಟ ಲಾವಣಿ ಪತ್ರ ನೋಂದಣಿ ಆಗಿತ್ತು ಎಂದರೆ ಸರಿ

ನನ್ನ ತಂದೆ ಸದರಿ ಜಮೀನನ್ನು ರೈತನಾತೆಯಿಂದ ಸಾಗು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯು ಈಗಲೂ ಸಹಾ ನಮ್ಮ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿದೆ ಎಂದರೆ ಸರಿಯಲ್ಲ.

ನಾನು ವಾದಿಯರ ವಿರುದ್ಧ ರಾಣೆಬೆನ್ನೂರಿನ ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒ ಎಸ ನಂಬರ 430/01 ನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯು ರಾಜಿ ಮೂಲಕ ದಿನಾಂಕ 17-11-2001 ರಂದು ಲೋಕ ಅದಾಲತ್ತಿನಲ್ಲಿ ಇತ್ಯರ್ಥವಾಗಿತ್ತು ಎಂದರೆ ಸರಿಯಲ್ಲ. ನಾಗಪ್ಪ ವೀರಪ್ಪ ಹೊಳಲು ಎಂಬ ವ್ಯಕ್ತಿ ನಮ್ಮೂರಿನಲ್ಲಿ ನಾನೊಬ್ಬನೇ ಇದ್ದೇನೆ. ಸದರಿ ದಾವೆಯಲ್ಲಿ ಶ್ರೀ ಎನವಿಸಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯ ರಾಜಿ ಡಿಕ್ರಿಯ ವಿರುದ್ಧ ನಾನು ಅಪೀಲು ಸಲ್ಲಿಸಿಲ್ಲ.

ಹರಿಹರ ನ್ಯಾಯಾಲಯದಲ್ಲಿ ನನ್ನ ಮತ್ತು ವಾದಿಯ ನಡುವೆ ಒ ಎಸ ನಂಬರ 223/02 ದಾವೆ ನಡೆದಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಚಪ್ಪರದ ವಕೀಲರನ್ನು ವಾದಿಯು ನೇಮಕ ಮಾಡಿಕೊಂಡಿದ್ದ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 15 ನೇ ಪ್ರತಿವಾದಿಯಾಗಿ ಮಲ್ಲಿಕಾರ್ಜುನಪ್ಪ ಹಾವೇರಿ ಎಂಬ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿ. ಸದರಿ ದಾವೆಯೂ ವಿಚಾರಣೆಯಾಗಿ ಡಿಕ್ರಿಯಾಗಿತ್ತು ಎಂದರೆ ಸರಿ. ಸದರಿ ಡಿಕ್ರಿ ವಿರುದ್ಧ ನಾನು ಅಪೀಲು ಸಲ್ಲಿಸಿಲ್ಲ.

1 ನೇ ವಾದಿಯು ಈ ದಾವೆಯಲ್ಲಿ ತಹಶೀಲ್ದಾರವರಿಂದ ವಂಶವೃಕ್ಷ ಪಡೆದು ಹಾಜರ ಪಡಿಸಿದಾದನೆ ಎಂದರೆ ಗೊತ್ತಿಲ್ಲ. ನಾನು ಹಾಜರಿಸಿದ ವಂಶವೃಕ್ಷದಲ್ಲಿ ವಾದಿಯರನ್ನು ಮತ್ತು ಚನ್ನಬಸಮ್ಮನ ಹೆಸರನ್ನು ತೋರಿಸಿಲ್ಲ ಎಂದರೆ ಸರಿ. ಕುಟುಂಬದ ಆಸ್ತಿಗಳ ಕುರಿತು ನಾನು ಮತ್ತು ನನ್ನ ಇಬ್ಬರು ಹೆಂಡತಿಯರು ಬೇಕಾಯ್ದೆ ಶೀರವಾಗಿ ಹಿಸ್ಸೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಡ ನಂಬರ 1503 ನ್ನು ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾದಾಸ್ತಿಗಳಿಗೆ ಸಂಬಂಧ ಪಡದೇ ಇರುವಂತಹ ಕೆಲವು ಮ್ಯುಟೇಶನಗಳನ್ನು ಈ ಕೇಸಿಗೆ ಅನುಕೂಲವಾಗುವಂತೆ ಸುಳ್ಳು ಸೃಷ್ಟಿ ಮಾಡಿ ಹಾಜರ ಪಡಿಸಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ವಿಪಿಸಿ ನಂಬರ 88, 89 ರಲ್ಲಿ ವಾಸ ಇದ್ದಾನೆ ಎಂದರೆ ಸರಿಯಲ್ಲ. ವಾದಿಯು ವಾಸವಾಗಿರುವ ಜಾಗೆಯ ಆಸ್ತಿ ನಂಬರ ಗೊತ್ತಿಲ್ಲ. ವಾದಿಯು ತರಗಾರ ಬಯಲಿನಲ್ಲಿ ವಾಸ ಇದ್ದಾನೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿ, ವಾದಿಯ ಹೆಂಡತಿ ಮಕ್ಕಳು ಮತ್ತು ನಾವು ಎಲ್ಲರೂ ದಾವಾ ಆಸ್ತಿಯ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿದ್ದೇವೆ ಎಂದರೆ ಸರಿಯಲ್ಲ. ಚನ್ನಬಸಮ್ಮ ಈರಪ್ಪ ಮತ್ತು ಕೊಟ್ರಮ್ಮಳ ಮಗಳು ಎಂದರೆ ಸರಿಯಲ್ಲ. ವಾದಿಯರು ಚನ್ನಬಸಮ್ಮನ ಮಕ್ಕಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಪ್ರಮಾಣೀಕರಿಸಿ ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 30/1 ರ ಫಾರ್ಮ ನಂಬರ 7 ರಲ್ಲಿ 1 ನೇ ವಾದಿಯ

ಹೆಸರು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

(ಬಿ.ಜಿ.ಪ್ರಮೋದ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.

ಓ ಹೇ ಕೆ ಸರಿ ಇದೆ